

بسم اللهِ الرّحمٰن الرّحيم

# ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬೋಧನೆಗಳು

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಬೈತುಲ್ ಫುತೂಹ್'** ಮಸೀದಿಯಲ್ಲಿ **29-01-2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಹೀಗೆ ಹೇಳಿದ್ದಾರೆ: ಅಲ್ಲಾಹನು ರಹಸ್ಯಮಯನಾಗಿದ್ದಾನೆ. ಆದರೆ ಅವನು ತನ್ನ ಶಕ್ತಿ ಸಾಮರ್ಥ್ಯಗಳ ಪ್ರದರ್ಶನದ ಮೂಲಕ ಗುರುತಿಸಲ್ಪಡುತ್ತಾನೆ. ಪ್ರಾರ್ಥನೆ ಮೂಲಕ ಅವನ ಅಸ್ತಿತ್ವದ ಬಗ್ಗೆ ತಿಳಿಯುತ್ತದೆ. ಒಬ್ಬನು ರಾಜನಾದರೂ ಸಾಮ್ರಾಟನಾದರೂ ಪ್ರತಿಯೊಬ್ಬ ಮನುಷ್ಯನಿಗೆ ಕೆಲವೊಮ್ಮೆ ಎಂತಹ ಕಷ್ಟ ಬರುತ್ತದೆ ಎಂದರೆ ಅಂತಹ ಸಂದರ್ಭದಲ್ಲಿ ಆತನಿಗೆ ತನ್ನ ಬಲಹೀನತೆಯ ಅರಿವಾಗುತ್ತದೆ. ಆಗ ಏನು ಮಾಡಬೇಕೆಂದು ಅವನಿಗೆ ತಿಳಿಯುವುದಿಲ್ಲ. ಅಂತಹ ಸಂದರ್ಭಗಳಲ್ಲಿ ಪ್ರಾರ್ಥನೆ ಮೂಲಕ ಕಷ್ಟವನ್ನು ಪರಿಹರಿಸ ಬಹುದಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಸಂಖ್ಯಾತ ಸ್ಥಳಗಳಲ್ಲಿ ವಿವಿಧ ರೀತಿಗಳಲ್ಲಿ ಪ್ರಾರ್ಥನೆಯ ಮಹತ್ವವನ್ನು ವಿವರಿಸಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಶಿಷ್ಯರು ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೊತೆಗೆ ಇದ್ದ ಕಾರಣದಿಂದ ಅವರಿಗೆ ಪ್ರಾರ್ಥನೆಗಳ ಬಗ್ಗೆ ಎಂತಹ ದೃಢವಿಶ್ವಾಸವಿತ್ತೆಂದರೆ ಅನ್ಯರ ಮೇಲೆಯೂ ಅವರ ವರ್ಚಸ್ಸು ಇದ್ದಿತು. ಅಹ್ಮದಿಯರೊಂದಿಗೆ ಸಂಬಂಧ ಹೊಂದಿದ ಮುಸ್ಲಿಮೇತರರು ಸಹ ಅಹ್ಮದಿಯರ ಪ್ರಾರ್ಥನೆಗಳು ಅಂಗೀಕರಿಸಲ್ಪಡುತ್ತವೆ ಎಂದು ಭಾವಿಸುತ್ತಿದ್ದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೀಗೆ ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಒಂದು ಘಟನೆ ವಿವರಿಸಿದಾಗ ಅವರು ಬಹಳ ನಕ್ಕರು. ಅದು ಹಝ್ರತ್ ಮುನ್‌ಶೀ ಅರೋಡೆ ಖಾನ್ ಸಾಹೇಬರಿಗೆ ಸಂಬಂಧಿಸಿದ ಘಟನೆಯಾಗಿತ್ತು. ಹಝ್ರತ್ ಮುನ್‌ಶೀ ಸಾಹೇಬರು ಆರಂಭ ಕಾಲದಲ್ಲಿ ಖಾದಿಯಾನಿಗೆ ಬಹಳ ಹೆಚ್ಚು ಸಾರಿ ಆಗಮಿಸುತ್ತಿದ್ದರು. ಒಂದು ದಿನ ಅವರು ತನ್ನ ಮೇಲಧಿಕಾರಿಯಾಗಿದ್ದ ಮೆಜಿಸ್ಟ್ರೇಟರೊಂದಿಗೆ ಹೇಳಿದರು: ನನಗೆ ಖಾದಿಯಾನಿಗೆ ಹೋಗಲಿಕ್ಕಿದೆ ನನಗೆ ರಜೆ ಕೊಡಿರಿ. ಆದರೆ ಅವರಿಗೆ ರಜೆ ನೀಡಲು ಆ ಅಧಿಕಾರಿ ನಿರಾಕರಿಸಿದರು. ಮುನ್‌ಶೀ ಸಾಹೇಬರು ಹೇಳಿದರು– ಬಹಳ ಒಳ್ಳೆಯದು ನಾನು ಇವತ್ತಿನಿಂದ ಈ ಅಧಿಕಾರಿಗೆ ಕೆಡುಕಾಗಲಿ ಎಂದು ಪ್ರಾರ್ಥಿಸುವೆನು. ನಂತರ ಆ ಮೆಜಿಸ್ಟ್ರೇಟರಿಗೆ ಎಂತಹ ಹಾನಿ ಉಂಟಾಯಿತೆಂದರೆ ಅವರು ಗಾಬರಿ ಗೊಂಡರು. ಅನಂತರ ಪ್ರತಿ ಶನಿವಾರ ಅವರು ನ್ಯಾಯಾಲಯದವರೊಂದಿಗೆ ಈ ದಿನ ಸ್ವಲ್ಪ ಬೇಗನೆ ಕಚೇರಿ ಕೆಲಸ ಮುಗಿಸಿರಿ ಎಂದು ಹೇಳುತ್ತಿದ್ದರು. ಇದೇ ರೀತಿ ಮುನ್‌ಶೀ ಸಾಹೇಬರು ಖಾದಿಯಾನಿಗೆ ಹೋಗುವ ನಿರ್ಧಾರ ಮಾಡಿದಾಗಲೆಲ್ಲ ಅವರಿಗೆ ರಜೆ ನೀಡುತ್ತಿದ್ದರು. ಅವರ ಪ್ರಾರ್ಥನೆಯ ಬಗ್ಗೆ ಅವರಿಗೆ ಅಷ್ಟು ಹೆದರಿಕೆ ಇತ್ತು. ಅಂತಹ ಜನರು ತಮ್ಮ ಹಿರಿಮೆ ಮತ್ತು ಪ್ರಾರ್ಥನೆಗಳ ಪ್ರಭಾವವನ್ನು ಅನ್ಯರ ಮೇಲೆಯೂ ಹಾಕಿದ್ದರು. ಈ ವಿಷಯವನ್ನು ಈಗ ನಾವು ಸಹ ನಮ್ಮ ಮುಂದೆ ಇರಿಸಬೇಕು ಮತ್ತು ಅಲ್ಲಾಹನೊಂದಿಗೆ ಸಂಬಂಧವನ್ನು ವರ್ಧಿಸಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಕೆಲವು ವಿಷಯಗಳನ್ನು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ವಿವರಿಸಿದ್ದಾರೆ. ಅವುಗಳು ನಮ್ಮ ಆಧ್ಯಾತ್ಮಿಕ ಅಭಿವೃದ್ಧಿ ಮತ್ತು ತರಬೇತಿಗೆ ಬಹಳ ಆವಶ್ಯಕವಾಗಿವೆ. ಲೋಕದಲ್ಲಿ ವಿವಿಧ ರೀತಿಗಳ ಪ್ರಕೃತಿ ಮತ್ತು ಭಾವನೆಗಳನ್ನು ಹೊಂದಿದ ಜನರಿದ್ದಾರೆ. ಕೆಲವರ ಭಾವನೆಗಳು ಬಹಳ ಸೂಕ್ಷ್ಮವಾಗಿರುತ್ತವೆ. ಬೇರೆ ಕೆಲವರ ಭಾವನೆಗಳು ಕಡಿಮೆ ರೀತಿಯವು ಗಳಾಗಿರುತ್ತವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಿವರಿಸಿದ ಭಾವನೆಗಳ ವ್ಯತ್ಯಾಸಕ್ಕೆ ಸಂಬಂಧಿಸಿದ ಒಂದು ಘಟನೆಯನ್ನು ಮುಸ್ಲಿಹ್ ಮೌಊದ್ ರಝಿಯಲ್ಲಾಹ್ ಅನ್‌ಹು ಹೀಗೆ ವಿವರಿಸುತ್ತಾರೆ: ಒಂದು ಪಟ್ಟಣದಲ್ಲಿ ಕೆಲವು ನಗರವಾಸಿಗಳು ಎಳ್ಳು ಬಹಳ ತಾಪದಾಯಕ ವಸ್ತು ಎಂದೂ ಒಬ್ಬನು ಒಂದು ಪಾವು ಎಳ್ಳು ತಿಂದರೆ ರೋಗಿಯಾಗದೆ ಇರಲಾರ ಎಂದೂ ಮಾತನಾಡುತ್ತಿದ್ದರು. ಆಗ ಒಬ್ಬ ಹೇಳಿದ ಯಾರಾದರೂ ಅಷ್ಟು ಎಳ್ಳು ತಿಂದರೆ ನಾನು ಅವನಿಗೆ ಐದು ರೂಪಾಯಿ ಬಹುಮಾನವಾಗಿ ಕೊಡುವೆನು ಎಂದು. ಅಲ್ಲಿಂದ ಒಬ್ಬ ರೈತ ದಾಟಿ ಹೋಗುತ್ತಿದ್ದ. ಅವನು ಆ ಮಾತನ್ನು ಆಲಿಸಿ ಕೇಳಿದನು ರೆಂಬೆಗಳ ಸಮೇತ ತಿನ್ನಬೇಕೋ ಅಥವಾ ರೆಂಬೆಗಳನ್ನು ಬಿಟ್ಟು ಎಳ್ಳು ಮಾತ್ರ ತಿನ್ನಬೇಕೋ? ಎಂದು ಕೇಳಿದನು. ನೋಡಿರಿ, ಇವರಿಬ್ಬರ ಭಾವನೆಗಳಲ್ಲಿ ಎಷ್ಟು ವ್ಯತ್ಯಾಸ ಇದೆ. ಒಂದು ಭಾಗದವರು ಪಾವು ಅಳತೆಯ ಎಳ್ಳು ತಿನ್ನುವುದು ಅಸಾಧ್ಯ ಎಂದು ಭಾವಿಸುತ್ತಾರೆ. ಇನ್ನೊಬ್ಬನು ಎಳ್ಳಿನ ಗಿಡದ ರೆಂಬೆಯ ಸಮೇತ ಅಷ್ಟು ಎಳ್ಳನ್ನು ತಿನ್ನಲು ಸಿದ್ಧನಾಗಿದ್ದಾನೆ.

ಈ ರೀತಿ ಲೋಕದ ಜನರಲ್ಲಿ ಭಾವನೆಗಳಿಗೆ ಸಂಬಂಧಿಸಿದ ವ್ಯತ್ಯಾಸಗಳಿರುತ್ತವೆ. ಆಧ್ಯಾತ್ಮಿಕ ಲೋಕದಲ್ಲೂ ಈ ವ್ಯತ್ಯಾಸದ ನಿಯಮ ಜಾರಿಯಲ್ಲಿದೆ. ಕೆಲವರ ಮೇಲೆ ನಮಾಝ್ ಹೆಚ್ಚು ಪ್ರಭಾವ ಬೀರುತ್ತದೆ. ಕೆಲವರ ಮೇಲೆ ಕಡಿಮೆ ಪ್ರಭಾವ ಉಂಟಾಗುತ್ತದೆ. ಕೆಲವರು ನಮಾಝ್ ಅನುಷ್ಠಿಸುತ್ತಾರೆ ಅಥವಾ ಬಾಹ್ಯವಾಗಿ ಮಾತ್ರ ಅದನ್ನು ಅನುಷ್ಠಿಸುತ್ತಾರೆ. ಅವರು ಅಂಗವಿನ್ಯಾಸಗಳನ್ನು ಮಾಡಿ ಹೊರಟು ಹೋಗುತ್ತಾರೆ. ಅವರ ಮೇಲೆ ನಮಾಝ್ ಯಾವ ರೀತಿಯ ಪ್ರಭಾವವನ್ನೂ ಬೀರುವುದಿಲ್ಲ. ಆಧ್ಯಾತ್ಮಿಕ ಭಾವನೆಗಳ ಬಗ್ಗೆ ಯಾರ ಸಾಕ್ಷ್ಯ ಅಂಗೀಕಾರ ಪಡೆಯುವುದೆಂದರೆ, ಅವರ ಮೇಲೆ ನಮಾಝಿನ ಪ್ರಭಾವ ಹೆಚ್ಚಿಗೆ ಇರುತ್ತದೆ. ಅದರ ಪ್ರಭಾವ ಅವರಲ್ಲಿ ಪ್ರಕಟವಾಗುತ್ತಾ ಇರುತ್ತವೆ. ನಮ್ಮ ಜಮಾಅತಿನಲ್ಲಿ ಇಂತಹ ವ್ಯಕ್ತಿಗಳು ಬಹು ಸಂಖ್ಯೆಯಲ್ಲಿರಬೇಕು. ಅವರ ಭಾವನೆಗಳು ಹೇಗಿರಬೇಕೆಂದರೆ ಆಧ್ಯಾತ್ಮಿಕ ಪ್ರಭಾವಗಳನ್ನು ಹೆಚ್ಚು ಹೆಚ್ಚಾಗಿ ಸ್ವೀಕರಿಸುವವರು ಮತ್ತು ಲೋಕಕ್ಕೆ ವಾಸ್ತವಿಕ ನಮಾಝ್ ಎಂದರೇನೆಂದು, ವಾಸ್ತವಿಕ ಆರಾಧನೆ ಏನೆಂದು ಮತ್ತು ಅದಕ್ಕೋಸ್ಕರ ಎಂತಹ ಭಾವನೆ ಹೊಂದಬೇಕು ಎಂದು ಹೇಳಿ ಕೊಡುವವರಾಗಬೇಕು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಘಟನೆ ಹೀಗೆ ವಿವರಿಸುತ್ತಾರೆ: ಹಝ್ರತ್ ಖಲೀಫತುಲ್ ಮಸೀಹ್ ಅವ್ವಲ್[ರ] ಹೀಗೆ ಹೇಳುತ್ತಿದ್ದರು: ಒಬ್ಬ ಮತಪಂಡಿತರಾಗಿದ್ದ ಮೌಲವಿ ಖಾನ್ ಮಲಿಕ್ ಸಾಹೇಬ್ ಅರಬಿ ವ್ಯಾಕರಣ ಶಾಸ್ತ್ರದ ಮಹಾನ್ ವಿದ್ವಾಂಸ ರಾಗಿದ್ದರು. ಅವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಸಮಾಚಾರ ದೊರಕಿದಾಗ ಅವರು ಖಾದಿಯಾನಿಗೆ ಬಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಮಾತನಾಡಿ ಬೈಅತ್ ಮಾಡಿದರು. ಖಾದಿಯಾನ್‌ನಿಂದ ಮರಳಿ ಹೋಗುವಾಗ ಅವರು

ಲಾಹೋರಿಗೆ ತಲಪಿದಾಗ ಅಲ್ಲಿನ ಶಾಹೀ ಮಸ್‌ಜಿದಿನಲ್ಲಿ ದರ್ಸ್ ನೀಡುತ್ತಿದ್ದ ತನ್ನ ಶಿಷ್ಯರಾದ ಮೌಲವಿ ಗುಲಾಮ್ ಅಹ್ಮದ್ ಸಾಹೇಬರನ್ನು ಬೇಟಿಯಾದರು. ಮೌಲವಿ ಗುಲಾಮ್ ಅಹ್ಮದ್ ಕೇಳಿದರು: ನೀವು ಎಲ್ಲಿಂದ ಆಗಮಿಸಿದಿರಿ? ಮೌಲವಿ ಖಾನ್ ಮಲಿಕ್ ಹೇಳಿದರು: ಖಾದಿಯಾನ್‌ನಿಂದ ಎಂದು. ಆಗ ಅವರು ಆಶ್ಚರ್ಯಗೊಂಡು ಕೇಳಿದರು: ಏನು ಖಾದಿಯಾನ್‌ನಿಂದ ಬಂದಿರೋ? ಮೌಲವಿ ಖಾನ್ ಮಲಿಕ್ ಹೇಳಿದರು: ಹೌದು ಖಾದಿಯಾನ್‌ನಿಂದ ಬಂದೆ. ಆಗ ಮೌಲವಿ ಗುಲಾಮ್ ಅಹ್ಮದ್ ಕೇಳಿದರು: ಖಾದಿಯಾನಿಗೆ ಏಕೆ ಹೋದಿರಿ. ಮೌಲವಿ ಖಾನ್ ಮಲಿಕ್ ಹೇಳಿದರು: ನಾನು ಖಾದಿಯಾನಿಗೆ ಹೋದುದು ಮಿರ್ಝಾ ಸಾಹೇಬರ ಶಿಷ್ಯನಾಗಲಿಕ್ಕೋಸ್ಕರ. ಆಗ ಮೌಲವಿ ಗುಲಾಮ್ ಅಹ್ಮದ್ ಹೇಳಿದರು: ನೀವು ಇಷ್ಟು ದೊಡ್ಡ ವಿದ್ವಾಂಸರಾಗಿರುವಿರಿ. ನೀವು ಮಿರ್ಝಾ ಸಾಹೇಬರಲ್ಲಿ ಯಾವ ಒಳಿತನ್ನು ಕಂಡು ಅವರ ಶಿಷ್ಯನಾಗಲು ಹೋದಿರಿ. ಆಗ ಮೌಲವಿ ಖಾನ್ ಮಲಿಕ್ ಸಾಹೇಬರು "ನೀನು ನಿನ್ನ ಕೆಲಸ ಮಾಡು. ನಿನಗೆ ಅರಬಿ ವ್ಯಾಕರಣ ಸಹ ಚೆನ್ನಾಗಿ ತಿಳಿದಿಲ್ಲ" ಎಂದು ಹೇಳಿದರು. ನೋಡಿರಿ, ಇಂತಹ ಸಾತ್ವಿಕರಾದ ಜನರು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡುತ್ತಿದ್ದರು. ಅವರಿಗೆ ತಮ್ಮ ವಿದ್ಯಾಭ್ಯಾಸ ಯೋಗ್ಯತೆ ಬಗ್ಗೆ ಅಹಂಭಾವವಿರಲಿಲ್ಲ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಇನ್ನೊಂದು ಘಟನೆ ಹೀಗೆ ವಿವರಿಸುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜೀವಿತ ಕಾಲದಲ್ಲಿ ಒಬ್ಬ ಅರಬಿ ಖಾದಿಯಾನಿಗೆ ಬಂದರು. ಅವರಿಗೆ ತಬ್ಲೀಗ್ ಮಾಡಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕೆಲವರನ್ನು ನಿಶ್ಚಯಿಸಿದರು. ಹಲವು ದಿನಗಳ ಕಾಲ ಚರ್ಚೆ ನಡೆದರೂ ಆ ಅರಬಿಯ ಮೇಲೆ ಪ್ರಭಾವ ಉಂಟಾಗಲಿಲ್ಲ. ಅವರಿಗೆ ತಬ್ಲೀಗ್ ಮಾಡಿದ ಜನರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೊಂದಿಗೆ ಹೇಳಿದರು: "ಈ ಅರಬಿ ಬಹಳ ಭಾವಾವೇಶ ಭರಿತರಾಗಿದ್ದಾರೆ. ಸಾಮಾನ್ಯ ಪ್ರಶ್ನೆ ಕೇಳುವವರ ಹಾಗಿಲ್ಲ. ಆದರೆ ಅವರಿಗೆ ಸತ್ಯ ತಿಳಿಯುವ ಅಭಿಲಾಷೆ ಇದೆ ಎಂದು ತೋರುತ್ತದೆ ಎಂದು ಹೇಳಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಆ ಅರಬಿಗೋಸ್ಕರ ಪ್ರಾರ್ಥಿಸಿದರು. ಆ ಅರಬಿಗೆ ಸತ್ಯ ದರ್ಶನವಾಗುವುದು ಎಂದು ಅಲ್ಲಾಹನು ತಿಳಿಸಿದನು. ಅಲ್ಲಾಹನ ವಿಧಿ ಪ್ರಕಾರ ಅದೇ ರಾತ್ರಿ ಯಾವುದೋ ವಿಷಯ ಅರಬಿಯ ಮೇಲೆ ಎಂತಹ ಪ್ರಭಾವ ಬೀರಿತೆಂದರೆ ಬೆಳಗ್ಗೆ ಬೈಅತ್ ಮಾಡಿ ಅಲ್ಲಿಂದ ಹಿಂದಿರುಗಿದರು.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಜ್ ಸಂದರ್ಭದಲ್ಲಿ ಹಜ್ ಯಾತ್ರಿಕರ ತಂಡಗಳಿಗೆ ಆ ಅರಬಿ ತಬ್ಲೀಗ್ ಮಾಡುತ್ತಿದ್ದರು. ಹಜ್ ಯಾತ್ರಿಕರ ಒಂದು ಗುಂಪು ಅವರನ್ನು ಹೊಡೆದು ಪ್ರಜ್ಞಾಶೂನ್ಯರಾಗಿ ಮಾಡಿದರೆ ಅವರು ಎಚ್ಚರಗೊಂಡಾಗ ಇನ್ನೊಂದು ಗುಂಪಿನ ಬಳಿಗೆ ಹೋಗಿ ತಬ್ಲೀಗ್ ಮಾಡುತ್ತಿದ್ದರು. ಇದರಿಂದ ತಿಳಿಯುವುದೇನೆಂದರೆ ಅಲ್ಲಾಹನು ಹೃದಯವನ್ನು ತೆರೆಯಬಯಸುವಾಗ ಅದು ತೆರೆದುಕೊಳ್ಳುತ್ತದೆ. ಆಗ ಎಂತಹ ತೀವ್ರ ಭಾವಾವೇಶ ಉಂಟಾಗುತ್ತದೆ ಎಂದರೆ ಅವರಿಗೆ ಯಾವುದರ ಬಗ್ಗೆಯೂ ಪರಿವೆ ಇರುವುದಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮಕ್ಕಳೊಂದಿಗೆ ಹೇಗೆ ವರ್ತಿಸುತ್ತಿದ್ದರು. ಅವರ ತರಬೇತಿ ಬಗ್ಗೆ ಹೇಗೆ ಲಕ್ಷ್ಯ ನೀಡುತ್ತಿದ್ದರು ಎಂಬುದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಮಕ್ಕಳಿಗೆ ಸರಿಯಾದ ತರಬೇತಿ ಆಟವಾಡಿಸುತ್ತಾ ನೀಡಬೇಕು. ಮಕ್ಕಳು ಬಹಳ ಚಿಕ್ಕವರಾಗಿರುವಾಗ ಕಥೆಗಳನ್ನು ಹೇಳಿ ಅವರಿಗೆ ತರಬೇತಿ ನೀಡುವುದು ಆವಶ್ಯಕವಾಗಿರುತ್ತದೆ. ದೊಡ್ಡವರಿಗೆ ಕೇವಲ ಉಪದೇಶಗಳು ಸಾಕಾಗುತ್ತದೆ. ಆದರೆ ಬಾಲ್ಯದಲ್ಲಿ ಮಕ್ಕಳಲ್ಲಿ ಆಸಕ್ತಿ ಉಂಟುಮಾಡಲು ಕಥೆಗಳು ಆವಶ್ಯಕವಾಗುತ್ತವೆ. ಕಥೆಗಳು ಸುಳ್ಳು ಕಥೆಗಳೇ ಆಗಿರಬೇಕೆಂದಿಲ್ಲ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕೆಲವು ಸಾರಿ ಹಝ್ರತ್ ಯೂಸುಫ್ ಅಲೈಹಿಸ್ಸಲಾಮರ ಕಥೆ ಹೇಳುತ್ತಿದ್ದರು. ಕೆಲವು ಸಾರಿ ಹಝ್ರತ್ ನೂಹ್ ಅಲೈಹಿಸ್ಸಲಾಮರ ಕಥೆಯನ್ನೂ ಕೆಲವು ಸಾರಿ ಹಝ್ರತ್ ಮೂಸಾ ಅಲೈಹಿಸ್ಸಲಾಮರ ಕಥೆಯನ್ನೂ ಹೇಳುತ್ತಿದ್ದರು. ಅವುಗಳಲ್ಲಿ ಸತ್ಯವಾದ ಘಟನೆಗಳನ್ನು ವಿವರಿಸಿದ್ದರೂ ಕಥಾ ರೂಪದಲ್ಲಿ ಹೇಳುತ್ತಿದ್ದರು. ಆದುದರಿಂದ ಬಾಲ್ಯದಲ್ಲಿ ಮಕ್ಕಳಿಗೆ ತರಬೇತಿ ನೀಡಲು ಅತ್ಯುತ್ತಮ ವಿಧಾನ ಕಥೆಗಳ ಮೂಲಕವಾಗಿದೆ. ಕೆಲವು ಕಥೆಗಳು ಅರ್ಥ ರಹಿತವೂ ನಿಷ್ಪ್ರಯೋಜಕವೂ ಆಗಿದ್ದರೂ ಉತ್ತಮ ಸ್ವಭಾವಗುಣಗಳನ್ನು ಕಲಿಸುವ ಉತ್ತಮ ನೀತಿಬೋಧೆ ನೀಡುವ ಕಥೆಗಳು ಸಹ ಇವೆ. ಮಕ್ಕಳ ಪ್ರಾಯ ಚಿಕ್ಕದಾಗಿರುವಾಗ ಈ ರೀತಿ ವಿದ್ಯೆ ಸಹ ಕಲಿಸಲಾಗುತ್ತಿದೆ. ಮಗು ಸ್ವಲ್ಪ ಹೆಚ್ಚು ಬೆಳೆದಾಗ ವಿದ್ಯೆ ಮತ್ತು ತರಬೇತಿ ನೀಡುವ ಉತ್ತಮ ವಿಧಾನ ಆಟಗಳಾಗಿವೆ. ಕೆಲವು ತಂದೆ ತಾಯಂದಿರು ನಮ್ಮ ಮಗು ಬಹಳ ಆಟವಾಡುತ್ತಾನೆ ಎಂದು ಹೇಳುತ್ತಾರೆ. ಮಗು ಟಿ.ವಿ. ಗೇಮ್‌ಗಳಲ್ಲಿ ಆಡದೆ ಹೊರಗೆ ಹೋಗಿ ಆಟವಾಡುತ್ತಿದ್ದರೆ ಅದನ್ನು ಆಟವಾಡಲು ಬಿಡಬೇಕು. ಪುಸ್ತಕಗಳ ಮೂಲಕ ಯಾವ ವಸ್ತುಗಳ ಬಗ್ಗೆ ಜ್ಞಾನ ನೀಡಲಾಗುತ್ತಿದೆಯೋ ಆಟಗಳ ಮೂಲಕ ಅವುಗಳನ್ನು ಕ್ರಿಯಾತ್ಮಕವಾಗಿ ನೀಡಲಾಗುತ್ತಿದೆ. ಆದರೆ ಕಥೆಗಳನ್ನು ಹೇಳುವ ಕಾಲ ಆಟವಾಡುವ ಮೊದಲಿನ ಕಾಲದಲ್ಲಾಗಿದೆ.

ತಂದೆಯಂದಿರು ಸಹ ಮಕ್ಕಳಿಗೆ ಸಮಯ ನೀಡಬೇಕು. ತಂದೆ, ತಾಯಿ ಇಬ್ಬರೂ ಮಕ್ಕಳ ತರಬೇತಿಗೆ ಒತ್ತು ನೀಡಿದರೆ ಅವರೊಂದಿಗೆ ಸ್ನೇಹ ಸಂಬಂಧವಿರಿಸಿದರೆ ಅವರಿಗೆ ಸರಿಯಾಗಿ ತರಬೇತಿ ನೀಡಿದರೆ ಅವರನ್ನು ತಮ್ಮೊಂದಿಗೆ ಜೋಡಿಸಿದರೆ ನಿಶ್ಚಯವಾಗಿಯೂ ತರಬೇತಿಯ ಅನೇಕ ಸಮಸ್ಯೆಗಳು ಪರಿಹರಿಸಲ್ಪಡುವುವು ಮತ್ತು ತಂದೆ ತಾಯಂದಿರ ದೂರುಗಳು ನಿವಾರಣೆ ಹೊಂದುವುವು.

ಇಂದಿನ ಕಾಲದಲ್ಲಿ ಮಕ್ಕಳು ತುಂಟಾಟ ಮಾಡದೆ ಬೇರೆಯಾಗಿ ಕುಳಿತುಕೊಳ್ಳಲಿ ಎಂದು ತಂದೆ ತಾಯಂದಿರು ಅವರ ಕೈಯಲ್ಲಿ ಐ–ಪ್ಯಾಡ್ ಕೊಡುತ್ತಾರೆ. ಕಂಪ್ಯೂಟರ್ ಮುಂದೆ ಅಥವಾ ಟಿ.ವಿ. ಮುಂದೆ ಕುಳ್ಳಿರಿಸುತ್ತಾರೆ. ಅಲ್ಲಿ ಮಕ್ಕಳಿಗೆ ಒಳ್ಳೆಯ ಯಾವುದಾದರೂ ಕಥೆ ದೊರಕುವುದಾದರೆ ಅದು ಉತ್ತಮ. ಆದರೆ ಕೆಲವು ಸಾರಿ ಕೇವಲ ಕಾಲವ್ಯರ್ಥವಾಗುತ್ತದೆ. ಚಿಕ್ಕ ಮಕ್ಕಳನ್ನು ಅವುಗಳ ಮುಂದೆ ಕುಳಿತುಕೊಳ್ಳುವಂತೆ ಮಾಡಬಾರದು. ಏಕೆಂದರೆ ಒಂದನೆಯದಾಗಿ, ಅವರು ದೀರ್ಘಕಾಲ ಕುಳಿತುಕೊಂಡಿದ್ದರೆ ಅದು ಅವರ ದೃಷ್ಟಿಗೆ ಹಾನಿಕರವಾಗುತ್ತದೆ. ಎರಡನೆಯದಾಗಿ, ಎರಡು ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳಲ್ಲಿ ಅವರ ಯೋಚನೆಯಲ್ಲಿ ವ್ಯತ್ಯಾಸ ಉಂಟಾಗಬಹುದೆಂದು ಡಾಕ್ಟರ್‌ಗಳು ಹೇಳುತ್ತಾರೆ. ಅವರು ಒಂದು ಕಡೆಗೆ ಆಗಿ ಬಿಡುತ್ತಾರೆ. ಕೆಲವು ಸಾರಿ ಕೆಟ್ಟ ಪ್ರಭಾವ ತಲೆದೋರುತ್ತವೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಕಥೆ ಹೇಳುತ್ತಿದ್ದುದರಿಂದ ನಮಗೆ ಬಹಳ ಪ್ರಯೋಜನವಾಗುತ್ತಿತ್ತು. ಆಗ ಅವರು ಕಥೆ ಹೇಳದಿದ್ದರೆ ನಾವು ಬೊಬ್ಬೆ ಹೊಡೆಯುತ್ತಿದ್ದೆವು. ಮತ್ತು ಅವರಿಗೆ ಕೆಲಸ ಮಾಡಲು ಸಾಧ್ಯವಾಗುತ್ತಿರಲಿಲ್ಲ. ಇದೇ ಕಾರಣದಿಂದ ಅವರು ಕಥೆ ಹೇಳಿ ನಾವು ಮೌನವಾಗಿರುವಂತೆ ಮಾಡುತ್ತಿದ್ದರು. ಆದುದರಿಂದ ರಾತ್ರಿ ಬಿಡುವು ದೊರೆತಾಗ ಅವರು ನಮಗೆ ಕಥೆ ಹೇಳಿ ನಾವು ನಿದ್ರಿಸುವಂತೆ ಮಾಡುತ್ತಿದ್ದರು.

ಮತ್ತು ತಮ್ಮ ಕೆಲಸ ಮುಂದುವರಿಸುತ್ತಿದ್ದರು. ಇಂದಿನ ಕಾಲದಲ್ಲಿ ಎಂತಹ ವಸ್ತುಗಳು ಬಂದಿವೆ ಎಂದರೆ ತಂದೆ ತಾಯಂದಿರು ಮಕ್ಕಳ ತರಬೇತಿಗೆ ಕಷ್ಟ ಪಡುವುದಿಲ್ಲ. ಎರಡನೆಯದಾಗಿ ಮಕ್ಕಳೊಂದಿಗೆ ತಂದೆ ತಾಯಂದಿರ ಸಂಬಂಧ ಕಡಿಮೆಯಾಗಿದೆ. ಇದರ ಬಗ್ಗೆ ಗಮನ ಹರಿಸಬೇಕಾದ ಅಗತ್ಯವಿದೆ.

ಸ್ನೇಹ ಸಂಬಂಧ ಹೇಗಿರಬೇಕೆಂದರೆ ಅದು ವಿನಾಶಕರವಾಗಬಾರದು ಎಂಬುದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದ ಒಂದು ಕಥೆಯನ್ನು ಹೀಗೆ ವಿವರಿಸಿದ್ದಾರೆ:

ಒಬ್ಬನಿಗೆ ಒಂದು ಕರಡಿಯೊಂದಿಗೆ ಸ್ನೇಹ ಸಂಬಂಧವಿತ್ತು ಆ ಕರಡಿ ಅವನಿಗೆ ಒಂದು ಸಂದರ್ಭದಲ್ಲಿ ಏನೋ ಉಪಕಾರ ಮಾಡಿದುದರಿಂದ ಅವನು ಆ ಕರಡಿಯನ್ನು ಸಾಕುತ್ತಿದ್ದನು ಅಥವಾ ಅದು ಅವನ ಬಳಿಗೆ ಬರುತ್ತಾ ಇತ್ತು. ಇದೊಂದು ಕಥೆಯಾಗಿದೆ. ಕೆಲವು ಸಾರಿ ಮನುಷ್ಯರು ಕರಡಿ ಮೊದಲಾದ ಮೃಗಗಳನ್ನು ಸಾಕುವುದೂ ಇದೆ. ಇದು ನೀತಿಪಾಠ ಹೇಳುವ ಒಂದು ಕಥೆ ಮಾತ್ರವಾಗಿದೆ. ಕರಡಿ ಆ ಮನುಷ್ಯನ ಸ್ನೇಹಿತನಾಗಿತ್ತು. ಅದು ಅವನ ಬಳಿಗೆ ಬಂದು ಕುಳಿತು ಕೊಳ್ಳುತ್ತಾ ಇತ್ತು. ಒಮ್ಮೆ ಆ ಮನುಷ್ಯನ ತಾಯಿ ರೋಗ ಬಾಧಿತೆಯಾಗಿ ಮಲಗಿದ್ದಳು. ಅವನು ಬೀಸಣಿಗೆಯಿಂದ ಗಾಳಿ ಬೀಸುತ್ತಾ ನೊಣಗಳನ್ನು ದೂರ ಹಾರಿಸುತ್ತಿದ್ದನು. ಅವನಿಗೆ ಯಾವುದೋ ಕೆಲಸಕ್ಕೆ ಹೊರಗೆ ಹೋಗಬೇಕಾಯಿತು. ಅವನು ಕರಡಿಗೆ ಸಂಜ್ಞೆ ಮೂಲಕ ನೊಣಗಳನ್ನು ಓಡಿಸುತ್ತಾ ಇರಲು ಹೇಳಿ ಹೊರಗೆ ಹೋದನು. ಕರಡಿ ನಿಷ್ಠೆಯಿಂದ ಆ ಕೆಲಸ ಮಾಡಲು ತೊಡಗಿತು. ಆದರೆ ಮನುಷ್ಯ ಮತ್ತು ಮೃಗದ ಕೈಗಳ ಚಲನೆಯಲ್ಲಿ ವ್ಯತ್ಯಾಸವಿರುತ್ತದೆ. ಮನುಷ್ಯನು ಕೈ ಅಲ್ಲಾಡಿಸುವ ಹಾಗೆ ಮೃಗಗಳು ಅಲ್ಲಾಡಿಸಲಾರದು. ಕರಡಿ ನಿಧಾನವಾಗಿ ನೊಣ ಓಡಿಸಿತು. ಆದರೆ ನೊಣ ಪುನಃ ಬಂದು ಕುಳಿತಿತು. ಪುನಃ ಓಡಿಸಲಾಯಿತು. ಪುನಃ ಬಂದು ಕುಳಿತಿತು. ಆಗ ಕರಡಿ ಯೋಚಿಸಿತು. ನೊಣ ಬಂದು ಪುನಃ ಪುನಃ ಕುಳಿತುಕೊಳ್ಳುತ್ತದೆ. ಅದು ನನ್ನ ಸ್ನೇಹಿತನ ತಾಯಿಗೆ ಬಹಳ ಅಸಹನೀಯವಾಗುತ್ತದೆ. ಕರಡಿ ಒಂದು ದೊಡ್ಡ ಕಲ್ಲು ಎತ್ತಿಕೊಂಡು ಬಂದು ನೊಣಕ್ಕೆ ಬಡಿಯಿತು. ನೊಣ ಸತ್ತಿತ್ತು ಅದರೊಂದಿಗೆ ಸ್ನೇಹಿತನ ತಾಯಿ ಸಹ ಜಜ್ಜಲ್ಪಟ್ಟಳು. ಈ ಕಥೆಯ ನೀತಿಪಾಠವೇನೆಂದರೆ ಕೆಲವು ಅವಿವೇಕಿಗಳು ಕೆಲವರೊಂದಿಗೆ ಸ್ನೇಹ ಹೊಂದುತ್ತಾರೆ. ಆದರೆ ಸ್ನೇಹ ಹೇಗೆ ಪ್ರಕಟಿಸಬೇಕೆಂದು ಅವರಿಗೆ ತಿಳಿದಿರುವುದಿಲ್ಲ. ಅವರು ಕೆಲವು ಸಾರಿ ಉಪಕಾರ ಮಾಡಲು ಕೆಲಸ ಮಾಡಿದರೂ ಅದರ ಪರಿಣಾಮ ನಾಶವೇ ಆಗಿರುತ್ತದೆ.

ಪ್ರೀತಿ ಅಲ್ಲಾಹನ ಸಾಮೀಪ್ಯ ಒದಗಿಸುತ್ತದೆ. ಸ್ನೇಹಿತರಿಗೆ ಉಪಕಾರ ನೀಡುತ್ತವೆ. ಆದರೆ ಕೆಲವು ಸಾರಿ ಅದು ಸ್ನೇಹಿತರಿಗೂ ತನಗೂ ನಾಶವನ್ನು ಉಂಟುಮಾಡುತ್ತದೆ. ಆದುದರಿಂದ ಸ್ನೇಹಿತರ ಹಕ್ಕುಗಳನ್ನು ಈಡೇರಿಸಿಕೊಡಲು ಬುದ್ಧಿಯನ್ನು ಬಳಸಬೇಕಾದ ಆವಶ್ಯಕತೆಯಿದೆ. ಭಾವಾವೇಶಗಳನ್ನು ಹತೋಟಿ ಯಲ್ಲಿರಿಸಬೇಕು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಕಥೆ ಹೇಳುತ್ತಿದ್ದರು. ಅದು ಹೀಗೆ: ಒಂದು ಕರಡಿಗೆ ಒಬ್ಬ ಮನುಷ್ಯನೊಂದಿಗೆ ಸ್ನೇಹವಿತ್ತು. ಅವನ ಪತ್ನಿ ಯಾವಾಗಲೂ ಅವನನ್ನು ನಿಂದಿಸುತ್ತಿದ್ದಳು ಕರಡಿಯೊಂದಿಗೆ ಸ್ನೇಹ ಹೊಂದಿರುವ ನೀನು ಮನುಷ್ಯನೋ? ಎಂದು ಹೇಳುತ್ತಿದ್ದಳು. ಒಂದು ದಿನ ಹೃದಯಕ್ಕೆ ನೋವುಂಟುಮಾಡುವ ಅವಳ ಮಾತು ಎಷ್ಟು ಹೆಚ್ಚಾಯಿತು ಮತ್ತು ಎಷ್ಟು ಉಚ್ಚ ಧ್ವನಿಯಿಂದ ಅವಳು ಮಾತನಾಡಿದಳೆಂದರೆ ಕರಡಿಗೂ ಅದು ಕೇಳಿಸಿತು. ಕರಡಿ ಒಂದು ಖಡ್ಗ ಎತ್ತಿಕೊಂಡು ತನ್ನ ಸ್ನೇಹಿತನಾದ ಮನುಷ್ಯನೊಂದಿಗೆ ಹೇಳಿತು: ಈ ಖಡ್ಗದಿಂದ ನನ್ನ ತಲೆಗೆ ಹೊಡಿ ಎಂದು. ಈ ಮಾತುಕತೆ ಬಗ್ಗೆ ಆಶ್ಚರ್ಯಪಡಬೇಕಾಗಿಲ್ಲ. ಇದೊಂದು ಕಥೆ ಮಾತ್ರವಾಗಿದೆ. ಇದರ ಅರ್ಥ, ಕೆಲವರು ಕರಡಿ ರೂಪದಲ್ಲಿ ಇರುತ್ತಾರೆ. ಕೆಲವರು ಮನುಷ್ಯ ರೂಪದಲ್ಲಿ ಎಂದು ಮಾತ್ರವಾಗಿದೆ. ಮನುಷ್ಯರಲ್ಲೂ ಕೆಲವು ಕರಡಿಗಳಿದ್ದಾರೆ. ಕೆಲವರು ಮನುಷ್ಯರು ಎಂದು ಕರೆಯಲ್ಪಡುತ್ತಿದ್ದಾರಾದರೂ ಮೃಗಗಳಾಗಿರುತ್ತಾರೆ. ಆ ಮನುಷ್ಯ ಕರಡಿಯ ಮಾತನ್ನು ಒಪ್ಪುವುದಿಲ್ಲ ಎಂದು ಹಲವು ಸಾರಿ ಹೇಳಿದ. ಆದರೆ ಕರಡಿ ಹೇಳಿತು: ನೀನು ನನ್ನ ತಲೆಗೆ ಖಡ್ಗದಿಂದ ಆವಶ್ಯಕವಾಗಿ ಹೊಡೆಯಬೇಕು. ಕೊನೆಗೆ ಅವನು ಖಡ್ಗ ಎತ್ತಿ ಕರಡಿ ತಲೆಗೆ ಹೊಡೆದನು. ಅದು ಗಾಯಗೊಂಡಿತು. ರಕ್ತ ಸುರಿಯಿತು. ಆಗ ಅದು ಕಾಡಿಗೆ ಹೋಯಿತು. ಒಂದು ವರ್ಷ ಕಳೆದ ನಂತರ ಕರಡಿ ಮರಳಿ ತನ್ನ ಮನುಷ್ಯ ಸ್ನೇಹಿತನ ಬಳಿಗೆ ಬಂತು. ಅದು ಹೇಳಿತು: ನನ್ನ ತಲೆಯನ್ನು ನೋಡು. ಎಲ್ಲಿಯಾದರೂ ಗಾಯದ ಕಲೆ ಕಾಣಿಸುತ್ತಿದೆಯೋ. ಅವನು ನೋಡಿದಾಗ ಗಾಯದ ಯಾವ ಕಲೆಯನ್ನೂ ಕಾಣಲಿಲ್ಲ. ಆಗ ಕರಡಿ ಹೇಳಿತು: ಕಾಡಿನಲ್ಲಿರುವ ಗಿಡಮೂಲಿಕೆ ಗಳಿಂದ ಚಿಕಿತ್ಸೆ ನಡೆಸಿದಾಗ ಗಾಯ ಒಣಗಿತು. ಆದರೆ ನಿನ್ನ ಪತ್ನಿಯ ಮಾತಿನಿಂದ ಉಂಟಾದ ಗಾಯ ಇನ್ನೂ ಒಣಗದೆ ನನ್ನ ಹೃದಯದಲ್ಲಿ ಈಗಲೂ ಉಳಿದಿದೆ.

ಕೆಲವು ಸಾರಿ ಖಡ್ಗದ ಗಾಯಕ್ಕಿಂತ ನಾಲಗೆ ಮಾಡುವಂತ ಗಾಯ ಹೆಚ್ಚು ಕಠಿಣವಾಗಿರುತ್ತದೆ. ನಾಲಗೆ ಎಂಬ ಖಡ್ಗ ಎಂತಹ ನೋವು ಉಂಟುಮಾಡು ತ್ತದೆ ಎಂದರೆ ಅದು ಎಂದೂ ಮರೆತು ಹೋಗುವುದಿಲ್ಲ. ಆದುದರಿಂದ ಸಮಾಜದಲ್ಲಿ ಶಾಂತಿಯನ್ನು ಕಾಪಾಡಲು ನೆಮ್ಮದಿಯನ್ನು ಪಡೆಯಲು ಪ್ರತಿಯೊಬ್ಬನು ನೆನಪಿಡಬೇಕಾದುದೇನೆಂದರೆ ನಾವು ಪರಸ್ಪರ ಭಾವನೆಗಳ ಬಗ್ಗೆ ಲಕ್ಷ್ಯ ನೀಡಬೇಕು. ಮತ್ತು ಅನಾವಶ್ಯಕವಾಗಿ ನಾಲಗೆಯಿಂದ ಬಾಣಗಳನ್ನು ಬಿಟ್ಟು ಸದಾ ಹಸಿಯಾಗಿರುವಂತಹ ಗಾಯಗಳನ್ನು ಮಾಡ ಬಾರದು. ಪ್ರತಿಯೊಬ್ಬ ಅಹ್ಮದಿ ಈ ನೀತಿಪಾಠವನ್ನು ನೆನಪಿನಲ್ಲಿಡಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ ನಂತರ ತನ್ನ ವಿಶ್ವಾಸವನ್ನು ಸಂರಕ್ಷಿಸುವುದು ಪ್ರತಿಯೊಬ್ಬ ಅಹ್ಮದಿಯ ಕಡ್ಡಾಯ ಕರ್ತವ್ಯ ಆಗಿದೆ. ಕೆಲವು ಸಾರಿ ಚಿಕ್ಕ ಚಿಕ್ಕ ಮಾತುಗಳಿಂದ ವಿಶ್ವಾಸ ನಷ್ಟವಾಗು ತ್ತದೆ. ಕೆಲವು ಸಾರಿ ಅಲ್ಲಾಹನ ಇಚ್ಛೆಗೆ ವಿರುದ್ಧವಾಗಿ ಮಾತನಾಡಿದರೆ ವಿಶ್ವಾಸ ನಷ್ಟವಾಗುತ್ತದೆ. ಆದುದರಿಂದ ಯಾವಾಗಲೂ ತನ್ನ ಮಾತು ಮತ್ತು ಕೃತ್ಯಗಳನ್ನು ಅವಲೋಕನ ಮಾಡುತ್ತಾ ಇರಬೇಕು.

ಝಿಕ್ರೆ ಇಲಾಹಿ (ಅಲ್ಲಾಹನ ನಾಮಸ್ಮರಣೆ) ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಬ್ಬ ಹಿರಿಯ ಸಾತ್ವಿಕರ ಈ ಹೇಳಿಕೆ ಬಗ್ಗೆ ಪ್ರಸ್ತಾಪಿಸುತ್ತಾ ಇದ್ದರು. **ದಸ್ತ್ ದರ್‌ಕಾರ್ ದಿಲ್ ಬಾಯಾರ್.** ಎಂದರೆ ಮನುಷ್ಯನ ಕೈ ಕೆಲಸ ಮಾಡುತ್ತಾ ಇರಬೇಕು. ಆದರೆ ಅವನ ಹೃದಯ ಯಾವಾಗಲೂ ಅಲ್ಲಾಹನನ್ನು ನೆನೆಸುತ್ತಾ ಇರಬೇಕು.

ಇದೇ ರೀತಿ ಇನ್ನೊಬ್ಬ ಹಿರಿಯರ ಬಗ್ಗೆ ಹೀಗೆ ಪ್ರಸಿದ್ಧವಾಗಿದೆ. ಅವರೊಂದಿಗೆ ಯಾರೋ ಕೇಳಿದರು: ಅಲ್ಲಾಹನ ಝಿಕ್ರ್ ನಾನು ಎಷ್ಟು ಸಾರಿ ಮಾಡಬೇಕು ಎಂದು. ಆಗ ಆ ಹಿರಿಯರು ಹೇಳಿದರು: ಪ್ರೀತಿಗೆ ಪಾತ್ರನಾದವನ ಹೆಸರು ಸ್ಮರಿಸುವಾಗ ಎಣಿಸಿ ಸ್ಮರಿಸಬೇಕೇ? ಅಂದರೆ ವಾಸ್ತವಿಕ ಝಿಕ್ರ್ ಅಸಂಖ್ಯಾತವಾಗಿರುತ್ತದೆ. ಆದರೆ ಝಿಕ್ರ್ ಮಾಡಲು ಒಂದು ನಿಗದಿತ ಸಮಯವನ್ನು ನಿಶ್ಚಯಿಸುವುದು ಉತ್ತಮವಾಗಿದೆ. ಏಕೆಂದರೆ ಬೇರೆ ಎಲ್ಲ ಕೆಲಸಗಳನ್ನು ಬಿಟ್ಟು ಆ ಸಮಯದಲ್ಲಿ ತನ್ನ ಪ್ರಿಯಕರನ ಸ್ಮರಣೆ ಮಾಡಬಹುದು.

ಈ ಎರಡು ಸ್ಥಿತಿಗಳೂ ಆವಶ್ಯಕವಾದುದರಿಂದ ಸರಿಯಾದ ರೀತಿ ಏನೆಂದರೆ ನಿರ್ದಿಷ್ಟ ರೂಪದಲ್ಲಿ ಝಿಕ್ರ್ ಮಾಡಬೇಕು. ಇಂದು ಲೌಕಿಕ

ವ್ಯವಹಾರಗಳಲ್ಲಿ ಬಿದ್ದಿರುವ ಜನರು ಈ ವಿಷಯ ಅರ್ಥ ಮಾಡಿಕೊಳ್ಳುವುದಿಲ್ಲ. ಆದುದರಿಂದ ಝಿಕ್ರ್ ಮಾಡಲು ಹೇಗಾದರೂ ಸಮಯ ಕಂಡುಕೊಳ್ಳಬೇಕು. ಅವರು ಕುಳಿತುಕೊಳ್ಳುವಾಗಲೂ ಏಳುವಾಗಲೂ ಅಸಂಖ್ಯಾತವಾಗಿ ಅಲ್ಲಾಹನ ಸ್ಮರಣೆ ಮಾಡುತ್ತಾ ಇರಬೇಕು. ಅವನು ನೀಡಿದ ಅನುಗ್ರಹಗಳನ್ನೂ ಔದಾರ್ಯಗಳನ್ನೂ ನೆನಪಿಸುತ್ತಾ ಇರಬೇಕು. ಧಾರ್ಮಿಕ ವಿಷಯಗಳನ್ನು ಶ್ರದ್ಧೆ ಇಟ್ಟು ಆಲಿಸಬೇಕಾದುದು, ಅವುಗಳನ್ನು ನೆನಪಿನಲ್ಲಿಡಲು ಪ್ರಯತ್ನಿಸುವುದು ಮತ್ತು ಅವುಗಳ ಪ್ರಕಾರ ಅನುಷ್ಠಾನ ಮಾಡುವುದು ಪ್ರತಿಯೊಬ್ಬ ಅಹ್ಮದಿಯ ಉದ್ದೇಶ ಲಕ್ಷ್ಯವಾಗಬೇಕು.

ಕೇವಲ ಖುತ್‌ಬ ಆಲಿಸುವುದು, ಜಲ್ಸಗಳಲ್ಲಿ ಭಾಗವಹಿಸುವುದು, ಯಾವುದಾದರೂ ಪುಸ್ತಕ ಓದುವುದು ಮತ್ತು ತಾತ್ಕಾಲಿಕವಾಗಿ ಅವುಗಳಿಂದ ಪ್ರಭಾವಿತನಾಗುವುದು ಆದರೆ ಅವುಗಳನ್ನು ನೆನಪಿನಲ್ಲಿ ಇಟ್ಟುಕೊಳ್ಳದಿರುವುದು ಮತ್ತು ಅವುಗಳ ಪ್ರಕಾರ ಅನುಷ್ಠಾನ ಮಾಡದಿರುವುದು ಮನುಷ್ಯನಿಗೆ ಯಾವ ಲಾಭವನ್ನೂ ನೀಡಲಾರದು. ಅದೇ ರೀತಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಗ್ರಂಥಗಳನ್ನು ಓದುವುದು ಮತ್ತು ಅವುಗಳಿಂದ ಲಾಭ ಪಡೆಯುವುದು ಜಮಾಅತಿನ ಮುಖ್ಯ ಕಡ್ಡಾಯ ಕರ್ತವ್ಯಗಳಲ್ಲಿ ಸೇರಿದೆ. ಆದರೆ ನೀವು ನೆನಪಿಡಿರಿ, ಕೇವಲ ರಸಾನುಭೂತಿ ಪಡೆಯಲು ಹಾಗೆ ಮಾಡಬೇಡಿರಿ. ನೀವು ಅದರಿಂದ ಲಾಭ ಪಡೆಯಲು ಮತ್ತು ಅದರ ಪ್ರಕಾರ ಕೆಲಸ ಮಾಡುವ ಸಂಕಲ್ಪದಿಂದ ಅವುಗಳ ಕಡೆಗೆ ಶ್ರದ್ಧೆ ನೀಡಿರಿ. ನೀವು ರಸಾನುಭೂತಿ ಪಡೆಯಲು ಪವಿತ್ರ ಖುರ್‌ಆನನ್ನು ಪೂರ್ಣವಾಗಿ ಓದಿದರೂ ನಿಮಗೆ ಯಾವ ಲಾಭವೂ ಸಿಗಲಾರದು. ಆದರೆ ನೀವು ಅಲ್ಲಾಹನ ಗುಣಗಳ ಬಗ್ಗೆ ಚಿಂತಿಸಿ ಅಲ್ಲಾಹನ ಪ್ರೀತಿಯಲ್ಲಿ ಪರವಶರಾಗಿ ಒಂದು ಸಲ ಸುಬ್‌ಹಾನಲ್ಲಾಹ್ ಎಂದು ಉಚ್ಚರಿಸಿದರೂ ಅದು ನಿಮ್ಮನ್ನು ಎಲ್ಲಿಂದ ಎಲ್ಲಿಗೋ ತಲಪಿಸುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಮ್ಮೆ ಒಂದು ಸಭೆಯಲ್ಲಿ ಹೀಗೆ ಹೇಳಿದರು: ಕೆಲವೊಮ್ಮೆ ನಾವು ಒಂದು ಸಾರಿ ತಸ್‌ಬೀಹ್ ಮಾಡಿದರೂ ಒಂದೇ ಒಂದು ತಸ್‌ಬೀಹ್‌ನಿಂದ ಎಲ್ಲಿಂದ ಎಲ್ಲಿಗೋ ತಲಪುತ್ತೇವೆ.

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನಾನು ಆ ಸಂದರ್ಭದಲ್ಲಿ ಅಲ್ಲಿರಲಿಲ್ಲ. ಒಬ್ಬ ತರುಣ ನನ್ನ ಬಳಿಗೆ ಬಂದು ಹೇಳಿದ ಹಝ್ರತ್ ಸಾಹೇಬರು ಹೀಗೆ ಏಕೆ ಹೇಳಿದರೆಂದು ನನಗೆ ತಿಳಿಯುವುದಿಲ್ಲ. ಆ ಯುವಕ ಅನುಭವ ಹೊಂದಿರಲಿಲ್ಲ. ಆದರೆ ನಾನು ಆ ಪ್ರಾಯದಲ್ಲೂ ಅನುಭವಶಾಲಿಯಾಗಿದ್ದೆ. ಅವನು ಇಡೀ ದಿನ ಸುಬ್‌ಹಾನಲ್ಲಾಹ್ ಎಂದು ಹೇಳಿದರೂ ಏನೂ ಪ್ರಯೋಜನವಾಗುತ್ತಿರಲಿಲ್ಲ. ಆದರೆ ನನಗೆ ನನ್ನ ಸ್ವಂತ ಅನುಭವದಿಂದ ತಿಳಿದಿತ್ತು, ನಾನು ಕೆಲವು ಸಾರಿ ಸುಬ್‌ಹಾನಲ್ಲಾಹ್ ಎಂದು ಹೇಳಿದಾಗ ನನಗೆ ಭಾಸವಾಗುತ್ತಿತ್ತು, ನಾನು ಮೊದಲು ಒಂದು ರೀತಿ ಇದ್ದೆ ಈಗ ಇನ್ನೊಂದು ರೀತಿಗೆ ತಲಪಿದ್ದೇನೆ ಎಂದು. ನೋಡಿರಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ಈ ವಿಷಯವನ್ನು ಬಹಳ ಉತ್ತಮವಾಗಿ ವಿವರಿಸಿದ್ದಾರೆ. ನಾನು ಆ ಸಮಯದಲ್ಲಿ ಬುಖಾರಿ ಗ್ರಂಥ ಓದಿರಲಿಲ್ಲ. ಆದರೆ ನನ್ನ ಅನುಭವ ಸತ್ಯವಾಗಿತ್ತು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಹೇಳಿದರು: ಎರಡು ವಾಕ್ಯಗಳು ರಹ್ಮಾನ್ ಆಗಿರುವ ಅಲ್ಲಾಹನಿಗೆ ಬಹಳ ಪ್ರಿಯವಾಗಿವೆ. ನಾಲಗೆಯಲ್ಲಿ ಅವು ಹಗುರವಾಗಿವೆ ಎಂದು. ಅದನ್ನು ಬಹಳ ಸುಲಭವಾಗಿ ಉಚ್ಚರಿಸಬಹುದಾಗಿವೆ. ಕಷ್ಟವೇನೂ ಇಲ್ಲ. ಆದರೆ ಖಿಯಾಮತ್ ದಿನ ಕರ್ಮಗಳನ್ನು ತೂಗಿಸಿ ನೋಡುವಾಗ ಅವು ಬಹಳ ಭಾರವಾಗಿರುವುವು. ಅವುಗಳಿರುವ ತ್ರಾಸಿನ ತಟ್ಟೆ ಬಹಳ ತಗ್ಗುವುದು. ಆ ವಾಕ್ಯಗಳು ಯಾವುವು? **ಸುಬ್‌ಹಾನಲ್ಲಾಹಿ ವ ಬಿ ಹಮ್‌ದಿಹೀ, ಸುಬ್‌ಹಾನಲ್ಲಾಹಿಲ್ ಅಝೀಮ್.**

ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳುತ್ತಾರೆ: ನಾನು ಈ ತಸ್‌ಬೀಹ್ ಬಹಳವಾಗಿ ಉಚ್ಚರಿಸುವ ಅಭ್ಯಾಸ ಮಾಡಿಕೊಂಡಿದ್ದೇನೆ. ಕೆಲವು ಸಾರಿ ಒಮ್ಮೆ ಈ ವಾಕ್ಯಗಳನ್ನು ಉಚ್ಚರಿಸಿದಾಗ ನನ್ನ ಆತ್ಮ ಹಾರಿ ಎಲ್ಲಿಂದ ಎಲ್ಲಿಗೋ ತಲಪುತ್ತದೆ.

ಒಟ್ಟಿನಲ್ಲಿ ಮುಖ್ಯವಾದುದೇನೆಂದರೆ, ನಾವು ಅಲ್ಲಾಹನ ಆಜ್ಞೆಗಳನ್ನು ಲಕ್ಷ್ಯವಿಟ್ಟು ಚಿಂತಿಸಿ ಅವುಗಳನ್ನು ಅನುಷ್ಠಾನಕ್ಕೆ ತರಲು ಪ್ರಯತ್ನಿಸಬೇಕು. ಕೆಲವು ಸಾರಿ ಹೃದಯದಿಂದ ಹೊರಡುವ ತಸ್‌ಬೀಹ್ ಮತ್ತು ತಹ್‌ಮೀದ್ ಅದರ ಪ್ರಭಾವ ತೋರಿಸುವ ಹಾಗೆ ತೋರುತ್ತದೆ ಎನ್ನುವುದು ಸತ್ಯವೇ ಆಗಿದೆ. ಅಲ್ಲಾಹನು ನಮಗೆಲ್ಲರಿಗೂ ಇದರ ಭಾಗ್ಯ ನೀಡಲಿ. ನಮ್ಮೊಳಗೆ ಕೆಲಸ ಮಾಡುವ ಶಕ್ತಿ ಸೃಷ್ಟಿಸಲಿ. ನಾವು ಅಲ್ಲಾಹನ ಸಂಪ್ರೀತಿ ಪಡೆಯುವವರನ್ನಾಗಿ ಮಾಡಲಿ. ನಾವು ತಸ್‌ಬೀಹ್, ತಹ್‌ಮೀದ್ ಮಾಡುವವರಾಗೋಣ. ಅವು ನಮ್ಮ ಆತ್ಮಗಳನ್ನು ಉನ್ನತಿಗೇರಿಸಲಿ ಮತ್ತು ನಮಗೆ ಅಲ್ಲಾಹನ ಸಾಮೀಪ್ಯ ದೊರಕುವಂತಾಗಲಿ – ಆಮೀನ್.

——————————*****——————————


***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 29-01-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon